ಮುನ್ನಡೆಯಿಂದ....

# ಸೂಜಿ-ದಾರ

ಸಂಪುಟ : 4 ಸಂಚಿಕೆ : 3 ಪುಟ : 8 ಖಾಸಗಿ ಪ್ರಸಾರಕ್ಕಾಗಿ ಜೂನ್ 2009

## ಕೇಳಿದ್ದು ರೂ. 200.... ಸಿಕ್ಕಿದ್ದು ಬರೀ ರೂ. 127 !

ಆತ್ಮೀಯ ಕಾರ್ಮಿಕರೇ,

ಕಡೆಗೂ 8 ವರ್ಷಗಳ ನಂತರ ಗಾರ್ಮೆಂಟ್ಸ್ ಉದ್ಯಮದ ವೇತನ ಪರಿಷ್ಕರಿಸಿ ದಿನಕ್ಕೆ 24 ರೂ.ಗಳಷ್ಟು ಹೆಚ್ಚಿಸಲಾಗಿದೆ!! ಈಗ ಗಾರ್ಮೆಂಟ್ ಕಾರ್ಮಿಕರಿಗೆ ನಿಗದಿಯಾಗಿರುವ ದಿನದ ಕನಿಷ್ಟ ವೇತನ 127 ರೂ. ಆದರೆ ನಾವು ಇದಕ್ಕೆ ಸಂತಸ ಪಡುವ ಹಾಗಿಲ್ಲ.

ಒಂದು ಕುಟುಂಬದ ಅತ್ಯಂತ ಮೂಲಭೂತ ಅವಶ್ಯಕತೆಗಳನ್ನು ಪೂರೈಸಲು ಕನಿಷ್ಟ ರೂ. 200 ಆದರೂ ಬೇಕು ಎಂದು ಮುನ್ನಡೆ ಮತ್ತು ಗಾರ್ಮೆಂಟ್ ಅಂಡ್ ಟೆಕ್ಸ್‌ಟೈಲ್ ವರ್ಕರ್ಸ್ ಯೂನಿಯನ್ (GATWU)ಗಳು, ಎರಡು ವರ್ಷಗಳಿಂದ ಆಂದೋಲನ ನಡೆಸುತ್ತಾ ಬಂದಿವೆ. ಆದರೆ, 8 ವರ್ಷಗಳ ನಂತರ, ಗಾರ್ಮೆಂಟ್ ಉದ್ಯಮಕ್ಕೆ ಸರ್ಕಾರ ಪರಿಷ್ಕರಿಸಿರುವ ಕನಿಷ್ಟ ವೇತನ, ದಿನಕ್ಕೆ ಕೇವಲ 127 ರೂ. ಅಷ್ಟೇ. ಅಂದರೆ, ತಿಂಗಳಿಗೆ 3307 ರೂ. ಆಗುತ್ತದೆ. ಈ ಬೆಂಗಳೂರು ಮಹಾನಗರದಲ್ಲಿ ತಿಂಗಳಿಗೆ ಇಷ್ಟು ವೇತನ ಪಡೆದು ಎಲ್ಲರಂತೆ ಜೀವನ ನಡೆಸಲು ಸಾಧ್ಯವೇ? ಇದು ಸರ್ಕಾರದ ಅರಿವಿಗೆ ಬರುತ್ತಿಲ್ಲವೇ?

ಬೆಂಗಳೂರಿನ ಗಾರ್ಮೆಂಟ್ಸ್ ಉದ್ಯಮದಲ್ಲಿ ಸುಮಾರು 5 ಲಕ್ಷ ಕಾರ್ಮಿಕರು ದುಡಿಯುತ್ತಿದ್ದಾರೆ. ಅಂತರರಾಷ್ಟ್ರೀಯ ಬ್ರಾಂಡ್‌ಗಳಿಗೆ ಉಡುಪು ತಯಾರಿಸುವ ಗೋಕಲ್‌ದಾಸ್ ಎಕ್ಸ್‌ಪೋರ್ಟ್ಸ್, ಟೆಕ್ಸ್‌ಪೋರ್ಟ್ಸ್ ಇಂಡಸ್ಟ್ರೀಸ್, ಬಾಂಬೆರೆಯಾನ್ ನಂತಹ ದೊಡ್ಡ ಕಂಪನಿಗಳ ವಾರ್ಷಿಕ ವಹಿವಾಟು 1000 ಕೋಟಿಗಳಷ್ಟು ಇವೆ. ಆದರೆ ಈ ಉದ್ಯಮ ಪ್ರಾರಂಭವಾಗಿ 35 ವರ್ಷಗಳಾದರೂ ಇಂದಿಗೂ ಸಹ ಇಲ್ಲಿ ದುಡಿಯುತ್ತಿರುವ ಕಾರ್ಮಿಕರಿಗೆ ಸರ್ಕಾರ ನಿಗದಿ ಮಾಡಿರುವ ಕನಿಷ್ಟ ವೇತನ ಮಾತ್ರ ಇಂದಿಗೂ ದಿನಕ್ಕೆ 127 ರ ಮೇಲೇರಿಲ್ಲ.

ಹತ್ತು ವರ್ಷ ಸೇವೆ ಸಲ್ಲಿಸಿದ ಕಾರ್ಮಿಕರಿಗೂ, ಇಂದು ಸೇರಿದ ಕಾರ್ಮಿಕರಿಗೂ ಒಂದೇ ರೀತಿಯ ವೇತನ. ಇದು, ಅನುಭವವುಳ್ಳ ಕಾರ್ಮಿಕರಿಗೆ ತೋರುತ್ತಿರುವ ತಾರತಮ್ಯವಾಗಿದೆ.

ದೇಶದಲ್ಲಿ ಲೋಕಸಭೆಗೆ ಚುನಾವಣೆಗಳೂ ನಡೆದು, ಕಾಂಗ್ರೆಸ್ ಮತ್ತು ಇತರ ಮಿತ್ರ ಪಕ್ಷಗಳು ಮತ್ತೆ ಅಧಿಕಾರಕ್ಕೆ ಬಂದಿದೆ. ನಮ್ಮ ಜನನಾಯಕರಿಗೆ 'ಕಾರ್ಮಿಕರು ದೇಶದ ಅಭಿವೃದ್ಧಿಗೆ ಆಧಾರಸ್ತಂಭ' ಎಂದು ಅರ್ಥವಾಗುತ್ತಿಲ್ಲ. ಒಟ್ಟಿನಲ್ಲಿ ಇತ್ತೀಚಿನ ದಿನಗಳಲ್ಲಿ ಕಾರ್ಮಿಕರಿಗೆ ಆಶಾದಾಯಕವಾದ ಯಾವೊಂದು ರಾಜಕೀಯ ಅಥವಾ ಸಾಮಾಜಿಕ ಬೆಳವಣಿಗೆ ನಡೆದಿಲ್ಲ. ಕಾರ್ಮಿಕರನ್ನು ಮತೂ ಕೆಳ ಮಟ್ಟಕ್ಕೆ ತಳ್ಳುವಂತೆ, ಇರುವ ಕಾನೂನುಗಳನ್ನು ಸಡಿಲಗೊಳಿಸುವ ಪ್ರಯತ್ನಗಳೂ ನಡೆದಿವೆ. ಈ ಧೋರಣೆ ಬಗ್ಗೆ ಕಾರ್ಮಿಕರಿಂದಲೂ ಸಹ ಬಲವಾದ ಪ್ರತಿಭಟನೆ ನಡೆಯಬೇಕಾಗಿದೆ.

2007ರಲ್ಲಿ ಬಿಡುಗಡೆಯಾದ ಅರ್ಜುನ್ ಸೇನ್ ಗುಪ್ತಾ ವರದಿಯ ಪ್ರಕಾರ ದೇಶದ ಜನಸಂಖ್ಯೆಯಲ್ಲಿ ಶೇ 65 ಭಾಗ ಅಸಂಘಟಿತ ಕಾರ್ಮಿಕರು ದುಡಿಯುತ್ತಿದ್ದಾರೆ. ಎಲ್ಲ ಪಕ್ಷಗಳ ಚುನಾವಣಾ ಮಂತ್ರವೂ, ಬಡತನ ನಿರ್ಮೂಲನೆ, ಅಗತ್ಯ ವಸ್ತುಗಳ ಬೆಲೆಯಿಳಿಕೆ ಇವೇ ಆಗಿರುತ್ತದೆ. ಆದರೆ ಬಡತನದ ಅಂಚಿನಲ್ಲಿರುವ ಕಾರ್ಮಿಕರ ಹಿತರಕ್ಷಣೆಗಾಗಿ ಯಾವೊಂದು ಪಕ್ಷಗಳು ಕಾಳಜಿವಹಿಸುತ್ತಿಲ್ಲ.

ಗಾರ್ಮೆಂಟ್ಸ್ ಉದ್ಯಮದಲ್ಲಿ ವೇತನ ಹೆಚ್ಚಳಕ್ಕಾಗಿ ಆಗ್ರಹಿಸುವ ಪ್ರತಿ ಬಾರಿಯೂ ಉದ್ಯಮಿಗಳು ತಮಗೆ ಅಷ್ಟು ಕೊಡಲು ಸಾಧ್ಯವಿಲ್ಲ ಎಂದೇ ಹೇಳುತ್ತಾರೆ. ಜಾಗತಿಕ ಮಟ್ಟದಲ್ಲಿ ಬೆಲೆಯ ಪೈಪೋಟಿ ಎದುರಿಸಲು ಕಡಿಮೆ ವೇತನ ನಿಗದಿಪಡಿಸುವುದು ಅನಿವಾರ್ಯ ಎಂದು ಸರ್ಕಾರ ಕೂಡಾ ಹೇಳುತ್ತದೆ. ಹಾಗಾದರೆ, ದೆಹಲಿಯ





ಮೇ ದಿನಾಚರಣೆಯಂದು 'ದುಡಿಯೋರ ಹೋರಾಟ'ದ ಜಗದೀಶ್‌ರವರಿಂದ ಮಾತು

ರಾವಣನ ಹೊಟ್ಟೆಗೆ ಅರೆಕಾಸಿನ ಮಜ್ಜಿಗೆ ಎಂಬಂತೆ, ಸರ್ಕಾರದಿಂದ ಪರಿಷ್ಕರಣೆಯಾದ ಗಾರ್ಮೆಂಟ್ಸ್ ಉದ್ಯಮದ ಕನಿಷ್ಟ ವೇತನದ ವಿವರವನ್ನು ಈ ಕೆಳಗೆ ಕೊಟ್ಟಿದೆ.

1. *ಎಂದಿನಂತೆ, 2007 ರ ವರೆಗಿನ ತುಟ್ಟಿ ಭತ್ಯೆಯ ಮೊತ್ತವನ್ನು ಮೂಲವೇತನಕ್ಕೆ ಸೇರಿಸಲಾಗಿದ್ದು, ಹೆಚ್ಚಿದ ಕನಿಷ್ಟ ವೇತನವು ಕೇವಲ 4.30 ಪೈಸೆ.*
2. *ತುಟ್ಟಿಭತ್ಯೆಯ ಪ್ರತಿ ಅಂಶದ ಬೆಲೆಯನ್ನು 3 ಪೈಸೆಯಿಂದ 4 ಪೈಸೆಗೆ ಏರಿಸಲಾಗಿದ್ದು, ಅದರ ಪ್ರಕಾರ ಕಾರ್ಮಿಕರಿಗೆ ದಿನಕ್ಕೆ ರೂ. 9.50 ರಷ್ಟು ತುಟ್ಟಿ ಭತ್ಯೆ ಸಿಗಲಿದೆ.*

| | ಕೆಲಸದ ಶ್ರೇಣಿ | ಮೂಲವೇತನ | ಡಿ.ಎ | ಒಟ್ಟು |
|---|---|---|---|---|
| 1. | ಅತಿ ಕುಶಲ (High skilled) | | | |
| | ಡಿಸೈನರ್ | 96.20 | 38.10 | 134.40 |
| | ಸ್ಯಾಂಪಲ್ ಟೈಲರ್ | 96.20 | 38.10 | 134.40 |
| 2. | ಕುಶಲ (Skilled) | | | |
| | ಟೈಲರ್ ಗ್ರೇಡ್ 1 | 95.00 | 38.10 | 133.10 |
| | ಕಟ್ಟರ್ | 95.00 | 38.10 | 133.10 |
| 3. | ಅರೆಕುಶಲ (Semi Skilled) | | | |
| | ಟೈಲರ್ ಗ್ರೇಡ್ 2 | 93.60 | 38.10 | 131.70 |
| | ಐರನರ್ | 93.60 | 38.10 | 131.70 |
| | ಕೆ/ಬಿ ಆಪರೇಟರ್ | 93.60 | 38.10 | 131.70 |
| | ಓವರ್ ಲಾಕರ್ | 93.60 | 38.10 | 131.70 |
| | ಮೆಷರ್‌ಮೆಂಟ್‌ಚೆಕರ್ | 93.60 | 38.10 | 131.70 |
| 4. | ಕುಶಲವಲ್ಲದ (Un Skilled) | | | |
| | ಟೈಲರ್ ಗ್ರೇಡ್ 3 | 88.90 | 38.10 | 127.00 |
| | ಹೆಲ್ಪರ್ | 88.90 | 38.10 | 127.00 |
| | ಪ್ಯಾಕರ್ | 88.90 | 38.10 | 127.00 |
| | ಟ್ರಿಮರ್ | 88.90 | 38.10 | 127.00 |
| | ಲೇಯರ್ | 88.90 | 38.10 | 127.00 |

ಸರ್ಕಾರವು ಶಾಸಕಿ ಸೀಮಾ ಮಸೂತಿಯವರ ನೇತೃತ್ವದಲ್ಲಿ ರಚಿಸಿದ ಸದನ ಸಮಿತಿಯು ಗಾರ್ಮೆಂಟ್ಸ್ ಕಾರ್ಖಾನೆಗಳಿಗೆ ಖುದ್ದು ಭೇಟಿ ನೀಡಿ, ಇಲ್ಲಿನ ಕಾರ್ಮಿಕರ ವೇತನ ರೂ. 3000 ದಿಂದ 4000 ವರೆಗೂ ಹೆಚ್ಚಾಗಬೇಕು ಹಾಗೂ ಸೇವಾವಧಿಯನ್ನು ಪರಿಗಣಿಸಬೇಕೆಂದು ವರದಿ ನೀಡಿದೆ. ಆದರೆ ಇದನ್ನು ಸರ್ಕಾರ ಗಮನಿಸಿದಂತಿಲ್ಲ.

## Panel for hike in garment staff pay

Special Correspondent

**BANGALORE:** The Women and Child Welfare Committee of the State Legislature has noticed gross discrepancies in the functioning of readymade garment factories in Bangalore and has come out with six recommendations for improving the working conditions for women in the units.

The committee headed by Seema Ashok Masuti on Friday tabled its report in the

ಗಾರ್ಮೆಂಟ್ಸ್ ಉದ್ಯಮದ ಕನಿಷ್ಟ ವೇತನವು ಬೆಂಗಳೂರಿಗಿಂತ ಶೇ. 25 ಹೇಗೆ ಹೆಚ್ಚಾಗಿದೆ? ಅವರೂ ದಿನಕ್ಕೆ 8 ಗಂಟೆ ದುಡಿಯುತ್ತಾರೆ, ಮತ್ತು ಹೆಚ್ಚಿನ ಕೆಲಸಕ್ಕೆ ಭತ್ಯೆ (ಒ.ಟಿ) ಪಡೆಯುತ್ತಾರೆ. ನಾವು ಮಾಡುವ ಬ್ರಾಂಡ್‌ಗಳಿಗೇ ಅವರೂ ಬಟ್ಟೆ ತಯಾರು ಮಾಡುತ್ತಾರೆ. ಹೀಗಿರುವಾಗ ನಮಗೆ ಕೊಡುವ ವೇತನಕ್ಕಿಂತ ಹೆಚ್ಚು ಕೊಡಲು ಆ ಮಾಲೀಕರಿಗೆ ಹೇಗೆ ಸಾಧ್ಯವಾಯಿತು?

ಪರಿಸ್ಥಿತಿ ಹೀಗಿರುವಾಗ, ಗಾರ್ಮೆಂಟ್ಸ್ ಉದ್ಯಮಕ್ಕೆ ನ್ಯಾಯಯುತ ವೇತನ ದೊರಕುವವರೆಗೂ ನಮ್ಮ ಹೋರಾಟವನ್ನು ಮುಂದುವರೆಸಲೇ ಬೇಕಾಗಿದೆ. ಆದ್ದರಿಂದಲೇ ಈ ಬಾರಿಯ ಮೇ ದಿನಾಚರಣೆಯನ್ನು ಗಾರ್ಮೆಂಟ್ ಅಂಡ್ ಟೆಕ್ಸ್‌ಟೈಲ್ ವರ್ಕ್‌ರ್ಸ್ ಯೂನಿಯನ್ (GATWU) ನ್ಯಾಯಯುತ ಕನಿಷ್ಟ ವೇತನವನ್ನು ಆಗ್ರಹಿಸಿ ಮೈಸೂರು ರಸ್ತೆಯಲ್ಲಿ ರ್‍ಯಾಲಿ ನಡೆಸುವುದರ ಮೂಲಕ ಆಚರಿಸಿತು. ದುಡಿಯೋರ ಹೋರಾಟದ ಜಗದೀಶ್‌ರವರು ಸಭೆಯನ್ನು ಉದ್ದೇಶಿಸಿ ಮಾತನಾಡಿದರು.



# ಅಹಿಲ್ಯಾ ರಂಗಣೇಕರ್: ಜನಸಮಸ್ಯೆಗಳಿಗೆ ಸ್ಪಂದಿಸುತ್ತಿದ್ದ ಮಹಿಳಾ ಹೋರಾಟಗಾರ್ತಿ

ಉತ್ಸಾಹೀ ಕಮ್ಯೂನಿಸ್ಟ್ ನಾಯಕಿ ಹಾಗೂ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದ ಮಹಿಳೆ ಎಂದು ಗುರುತಿಸಿಕೊಂಡಿದ್ದ ಅಹಿಲ್ಯಾ ರಂಗಣೇಕರ್ 2009ರ ಏಪ್ರಿಲ್ 19 ರಂದು ತಮ್ಮ 87ನೇ ವಯಸ್ಸಿನಲ್ಲಿ ಮುಂಬೈನಲ್ಲಿ ಕೊನೆಯುಸಿರೆಳೆದಿದ್ದಾರೆ.

ಜನರಿಂದ 'ಅಹಿಲ್ಯಾತಾಯಿ' ಎಂದು ಪ್ರೀತಿಯಿಂದ ಕರೆಸಿಕೊಳ್ಳುತ್ತಿದ್ದ ಅವರು, ಮಾರ್ಕ್ಸ್‌ವಾದೀ ಕಮ್ಯೂನಿಸ್ಟ್ ಪಕ್ಷದ ಕೇಂದ್ರ ಸಮಿತಿಯ ಸದಸ್ಯರೂ, ಹಾಗೂ ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯ ಸ್ಥಾಪಕ ಸದಸ್ಯರಾಗಿದ್ದರು. ಮುಂಬೈನ ರಾಜಕೀಯ ಕ್ಷೇತ್ರದಲ್ಲಿ ಸಕ್ರಿಯ ಪಾತ್ರ ವಹಿಸಿದ್ದ ಅಹಿಲ್ಯಾತಾಯಿ ಜನಗಳ ಸಮಸ್ಯೆಗಳಿಗೆ ಯಾವಾಗಲೂ ಸ್ಪಂದಿಸುತ್ತಿದ್ದವರು. ರಾಜಕೀಯ ಕ್ಷೇತ್ರದಲ್ಲಿ ಪ್ರಭಾವ ಹೊಂದಿದ್ದವರು. ಮುಂಬೈನ ಕಾರ್ಪೋರೇಟರ್ ಆಗಿ ಆಯ್ಕೆಯಾಗಿ ಬಡವರ ಹಾಗೂ ಶೋಷಿತರ ನಾಗರೀಕ ಸೌಲಭ್ಯದ ಬಗ್ಗೆ ಅವರು ಮಾಡಿದ ಕೆಲಸ ಗಣನೀಯವಾದದ್ದು. ಮುಂಬೈ ಕೊಳೆಗೇರಿಗಳಲ್ಲಿ ವಾಸಿಸುವ ಜನರಿಗೆ ನೀರಿನ ವ್ಯವಸ್ಥೆಯನ್ನೂ ಒಳಗೊಂಡಂತೆ, ಉತ್ತಮ ವಾತಾವರಣವನ್ನು ಒದಗಿಸಲು ಅವರು ಹೋರಾಡಿದ್ದರು.



ಫೋಟೋ ಕೃಪೆ: ದಿ ಹಿಂದೂ, ಏಪ್ರಿಲ್ 20,2009

ವಿದ್ಯಾರ್ಥಿಯಾಗಿದ್ದಾಗಲೇ ಸ್ವಾತಂತ್ರ್ಯ ಹೋರಾಟಗಳಲ್ಲಿ ಭಾಗವಹಿಸಿ, ಸೆರೆಮನೆಗೂ ಹೋಗಿದ್ದ ಅವರು 1943 ರಲ್ಲಿ ಮುಂಬೈನ ಗಿರಣಿ ಕಾರ್ಮಿಕರನ್ನು ಸಂಘಟಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಅಲ್ಲದೆ ಇತರ ಮಹಿಳಾ ಹೋರಾಟಗಾರ್ತಿಯರೊಂದಿಗೆ 'ಪರೇಲ್ ಮಹಿಳಾ ಸಂಘ' ಎಂಬ ಸಂಘಟನೆಯನ್ನು ಸ್ಥಾಪಿಸಿದ್ದರು.

87 ವರ್ಷದ ಇಳಿವಯಸ್ಸಿನಲ್ಲಿಯೂ ಸಹ ಜನಗಳ ಮಧ್ಯೆ ಗುರುತಿಸಿಕೊಂಡು ಅವರ ಸಮಸ್ಯೆಗಳಿಗೆ ಸ್ಪಂದಿಸುತ್ತಿದ್ದ ಅವರು ಯಾವಾಗಲೂ ಸಮಾಜಮುಖಿಯಾಗಿದ್ದವರು.

ಅವರ ಹೋರಾಟದ ಜೀವನವು ಮಹಿಳಾ ಹೋರಾಟಗಾರ್ತಿಯರಿಗೆ ಮಾದರಿಯಾಗಿದ್ದು, ಅವರ ಆತ್ಮಕ್ಕೆ 'ಮುನ್ನಡೆ' ಈ ಮೂಲಕ ಶ್ರದ್ಧಾಂಜಲಿ ಅರ್ಪಿಸುತ್ತಿದೆ. ●

# ನಮ್ಮ ಆರೋಗ್ಯ ನಮ್ಮ ಹಕ್ಕು

## ನಾಯಂಡಹಳ್ಳಿಯ ಮುನ್ನಡೆ ಆಫೀಸ್‌ನ ವಾರ್ಷಿಕೋತ್ಸವ




"ಆರೋಗ್ಯ ನಮ್ಮ ಮೂಲಭೂತ ಹಕ್ಕು ಆರೋಗ್ಯ ರಕ್ಷಣೆ ಎಂದರೆ ಕಾಯಿಲೆ ಬಂದಾಗ ವೈದ್ಯರ ಹತ್ತಿರ ಹೋಗಿ ಔಷಧ ತೆಗೆದುಕೊಳ್ಳುವುದಲ್ಲ. ಅದು ನಮ್ಮ ಜೀವನದ ಪ್ರಥಮ ಆದ್ಯತೆಯಾಗಬೇಕು." ನಾಯಂಡಹಳ್ಳಿ ಮುನ್ನಡೆ ಕೇಂದ್ರವು ತನ್ನ ವಾರ್ಷಿಕೋತ್ಸವ ಆಚರಿಸಿಕೊಂಡ ಸಂದರ್ಭದಲ್ಲಿ ಜನಾರೋಗ್ಯ ಆಂದೋಲನದ ಓಬಳೇಶ್‌ರವರು ಕಾರ್ಮಿಕರನ್ನು ಉದ್ದೇಶಿಸಿ ಹೇಳಿದ ಮಾತು ಇದು. ದಿನಾಂಕ: 26–4–09ರಂದು ನಡೆದ ಈ ಕಾರ್ಯಕ್ರಮದಲ್ಲಿ ಸ್ಪ್ಯಾಡ್ ಸಂಸ್ಥೆಯ ಲೀಲಾ ಅವರು ಉಪಸ್ಥಿತರಿದ್ದು, ಸಾಮಾನ್ಯ ಆರೋಗ್ಯದ ಬಗ್ಗೆ ಮಾತನಾಡಿದರು. ಈ ಸಂದರ್ಭದಲ್ಲಿ ಸಮುದಾಯ ಆರೋಗ್ಯ ಕೋಶ ಹಾಗೂ ಜನಾರೋಗ್ಯ ಆಂದೋಲನ–ಕರ್ನಾಟಕ ಈ ಸಂಸ್ಥೆಗಳು ಮುನ್ನಡೆಗೆ ನೀಡುತ್ತಿರುವ ಬೆಂಬಲವನ್ನು ಸ್ಮರಿಸಿ, ಹೂವಿನ ಗುಚ್ಛವನ್ನು ನೀಡುವ ಮೂಲಕ ಸನ್ಮಾನಿಸಲಾಯಿತು.

ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಆರೋಗ್ಯವನ್ನು ಗಂಭೀರವಾಗಿ ಪರಿಗಣಿಸಬೇಕೆಂದು ಮುನ್ನಡೆ ನಿರ್ಧರಿಸಿ, ಕಳೆದ ಒಂದು ವರ್ಷದಿಂದ, ತಿಂಗಳ ಎರಡನೆ ಭಾನುವಾರದಂದು ಕಾರ್ಮಿಕರಿಗೆ ಉಚಿತ ಆರೋಗ್ಯ ಕ್ಲಿನಿಕ್ ಅನ್ನು ಏರ್ಪಡಿಸುತ್ತಲೇ ಬಂದಿದೆ. ಇದಲ್ಲದೆ ಇನ್ನೂ ಹಲವಾರು ಕಾರ್ಯಕ್ರಮಗಳನ್ನು ಯೋಜಿಸಿ ಆ ನಿಟ್ಟಿನಲ್ಲಿ ಕೆಲಸ ಮುಂದುವರೆಸುತ್ತಿದೆ. ಸಮುದಾಯ ಆರೋಗ್ಯ ಕೋಶ ದೊಂದಿಗೆ ಮುಂದಿನ ಒಂದು ವರ್ಷದಲ್ಲಿ ಮುನ್ನಡೆ ಈ ಕೆಳಗಿನ ಯೋಜನೆಗಳನ್ನು ಹಾಕಿಕೊಂಡಿದೆ.

1. ಕಾರ್ಮಿಕರಿಗೆ ಉಚಿತ ಆರೋಗ್ಯ ಕ್ಲಿನಿಕ್ – ಪ್ರತಿ ತಿಂಗಳ ಎರಡನೆ ಭಾನುವಾರ
2. ಲೋಕಲ್ ಕಮಿಟಿಗಳ ಮೂಲಕ ಏರಿಯಾಗಳಲ್ಲಿರುವ ಆರೋಗ್ಯ ವ್ಯವಸ್ಥೆ (ಪ್ರಾಥಮಿಕ ಆರೋಗ್ಯ ಕೇಂದ್ರ, ಇ.ಎಸ್.ಐ ಡಿಸ್ಪೆನ್ಸರಿ)ಗಳನ್ನು ಗುರುತಿಸುವುದು.
3. ಕಾರ್ಮಿಕರ ಕಾಯಿಲೆಯ ಡಾಕ್ಯುಮೆಂಟೇಶನ್ ಮಾಡುವುದು—ಈ ಮೂಲಕ ಗಾರ್ಮೆಂಟ್ಸ್ ಕಾರ್ಮಿಕರಿಗೆ ಆಗಾಗ ಬರುತ್ತಲೇ ಇರುವ ಒಂದೇ ರೀತಿಯ ಕಾಯಿಲೆಯನ್ನು ಗುರುತಿಸಿ, ಅದನ್ನು ವೃತ್ತಿಯಾಧಾರಿತ ಕಾಯಿಲೆ ಎಂದು ಗುರುತಿಸುವುದು.
4. ಇ.ಎಸ್.ಐ ನಲ್ಲಿರುವ ಅನಾನುಕೂಲತೆಗಳ ಬಗ್ಗೆ ಆಂದೋಲನ ನಡೆಸುವುದು. ಇತ್ಯಾದಿ.

ಈ ಯೋಜನೆಗಳನ್ನು ಜಾರಿಗೆ ತರುವಲ್ಲಿ ಮುನ್ನಡೆಯು ಈಗ ಪ್ರಾಥಮಿಕ ಹಂತದಲ್ಲಿ ಕೆಲಸ ಮಾಡುತ್ತಿದೆ. ಮುಂದೆ ಕಾರ್ಮಿಕರ ಆರೋಗ್ಯ ರಕ್ಷಣೆಯಲ್ಲಿ ಈ ಯೋಜನೆಗಳು ಪ್ರಮುಖ ಪಾತ್ರ ವಹಿಸುತ್ತದೆ ಎಂದು ಮುನ್ನಡೆಯ ನಂಬಿಕೆಯಾಗಿದೆ. ●



ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ

**ಮುನ್ನಡೆ**

ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ

ದಿನಾಂಕ: 08-03-2009 ಸ್ಥಳ: ನಾಯಂಡಹಳ್ಳಿ

# ಮಾರ್ಚ್ 8, 2009 ಮಹಿಳೆಯ ದಿನ. . . .

## ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರು ಸಂಭ್ರಮಿಸಿದ್ದು ಹೀಗೆ. . .



"ನಾವೂ ಸಂಭ್ರಮಿಸಬಲ್ಲೆವು, ನಾವೂ ಸಂಘಟಿಸಬಲ್ಲೆವು. . . ." ಇವು ಮಾರ್ಚ್ 8, 2009ರ ಮಹಿಳಾ ದಿನದಂದು ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಮುನ್ನಡೆಯ ಸದಸ್ಯರು ಸಂತಸದಿಂದ ಹಂಚಿಕೊಂಡ ಮಾತು. ನಗರದ 9 ವಿವಿಧ ಕಡೆಗಳಲ್ಲಿ ಮುನ್ನಡೆಯಿಂದ ಮಹಿಳಾ ದಿನವನ್ನು ಆಚರಿಸಿದ ಸಂತೋಷ ಅವರ ಮಾತಿನಲ್ಲಿತ್ತು.

ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರು ವಾಸ ಮಾಡುವಲ್ಲಿ ಅವರನ್ನು ಸಾಮಾಜಿಕವಾಗಿ ಸಂಘಟಿಸುತ್ತಿರುವ ಮುನ್ನಡೆ ಈ ಬಾರಿಯ ಮಹಿಳಾ ದಿನಾಚರಣೆಯನ್ನು ವಿಶಿಷ್ಟವಾಗಿ 9 ವಿವಿಧ ಸ್ಥಳಗಳಲ್ಲಿ ಆಚರಿಸುವ ಯೋಜನೆ ಹಾಕಿಕೊಂಡಾಗ ಸದಸ್ಯರೆಲ್ಲರಿಗೂ ಆತಂಕ ಬೆರೆತ ಸಂತಸವಿತ್ತು. ಆದರೆ ಈಗ ಹಿಂತಿರುಗಿ ನೋಡಿದರೆ ಈ ಕಾರ್ಮಿಕರು ಮಾಡಿದ ಕೆಲಸ, ಕಾರ್ಯಕ್ರಮ ಸಂಘಟಿಸಲು ತೆಗೆದುಕೊಂಡ ಜವಾಬ್ದಾರಿ ಎಲ್ಲವೂ ಶ್ಲಾಘನೀಯವೆನಿಸುತ್ತದೆ.




ಕಸ್ತೂರಬಾ ನಗರ, ಸಂಜಯನಗರ, ಮಲ್ಲತ್ತಹಳ್ಳಿ, ಬಂಗಾರಪ್ಪನಗರ, ಕೆಂಚೇನಹಳ್ಳಿ, ನಾಯಂಡ ಹಳ್ಳಿ, ವಿನಾಯಕ ಬಡಾವಣೆ, ಪಂತರಪಾಳ್ಯ ಈ ಏರಿಯಾಗಳಲ್ಲಿರುವ ಗಾರ್ಮೆಂಟ್ಸ್ ಕಾರ್ಮಿಕರನ್ನು ಒಗ್ಗೂಡಿಸಿ, ಅವರಿಂದ ಹಾಗೂ ಅವರ ಮಕ್ಕಳಿಂದ ಮಹಿಳಾ ವಿಷಯಗಳನ್ನು ಅಧರಿಸಿದ ರಂಗೋಲಿಗಳನ್ನು ಬಿಡಿಸಿ, ಸಣ್ಣ ಸಭೆ ನಡೆಸುವ ಮೂಲಕ ಮುನ್ನಡೆಯ ಸದಸ್ಯರು ಮಹಿಳಾ ದಿನಾಚರಣೆಯನ್ನು ಆಚರಿಸಿ ಹರ್ಷ ಪಟ್ಟರು.



ಕೆಂಗೇರಿ ಉಪನಗರದ ಬಳಿಯಿರುವ ಬೀಡಿ ಕಾರ್ಮಿಕರ ಕಾಲೋನಿಯಲ್ಲಿ ಸ್ಥಳೀಯರ ನೆರವಿನಿಂದ ಉಚಿತ ಆರೋಗ್ಯ ಶಿಬಿರವನ್ನೂ ಸಹ ಆಯೋಜಿಸಲಾಗಿತ್ತು.

ಸ್ಥಳೀಯರ ಬೆಂಬಲದೊಂದಿಗೇ ಈ ಕಾರ್ಯಕ್ರಮ ನಡೆಸುವುದು ಮುನ್ನಡೆಯ ಸದಸ್ಯರ ಆಶಯವಾಗಿತ್ತು. ಅದರ ಒಂದು ಭಾಗವಾಗಿ, ಕಾರ್ಯಕ್ರಮಕ್ಕಾಗಿ ಸುಮಾರು 7ರಿಂದ 8 ಸಾವಿರ ರೂ.ಗಳನ್ನು ಮುನ್ನಡೆಯ ಸದಸ್ಯರು ಸ್ಥಳೀಯರಿಂದ ಸಂಗ್ರಹಿಸಿದ್ದರು.



ಮಾನಸ ಬಳಗದ ರಾಜೇಶ್ವರಿ, ವಕೀಲೆ ದಿವ್ಯಾ, ಸ್ವಾಡ್ ಸಂಸ್ಥೆಯ ಕಾರ್ಯಕರ್ತರಾದ ಲೀಲಾ, ಅಮುದಾ ಹಾಗೂ ಶ್ವೇತಾ, ಎನ್.ಟಿ.ಯು.ಐ.ನ ಅಪೂರ್ವ, ಸಂವಾದ ಸಂಸ್ಥೆಯ ಇಶ್ರತ್ ನಿಸಾರ್ ಮುಂತಾದವರು ಕಾರ್ಮಿಕರು ನಡೆಸಿದ ಈ ಕಾರ್ಯಕ್ರಮದಲ್ಲಿ ಭಾಗವಹಿಸಿ, ನೆರೆದಿದ್ದ ಕಾರ್ಮಿಕರನ್ನುದ್ದೇಶಿಸಿ ತಮ್ಮ ಮಾತುಗಳನ್ನು ಹಂಚಿಕೊಂಡರು.

ಮಹಿಳಾ ದಿನಾಚರಣೆಯ ಆಚರಣೆಯ ಮಹತ್ವ, ಇಂದಿನ ಸಂದರ್ಭದಲ್ಲಿ ಮಹಿಳೆಯರು ಎದುರಿಸುತ್ತಿರುವ ಸಮಸ್ಯೆಗಳು, ಆರೋಗ್ಯ, ಶಿಕ್ಷಣ ಸ್ವಾತಂತ್ರ್ಯ ಗಳಿಂದ ಮಹಿಳೆ ಹೇಗೆ ವಂಚಿತಳಾಗುತ್ತಿದ್ದಾಳೆ ಎಂಬುದರ ಕುರಿತು ಎಲ್ಲಕಡೆಯೂ ಚರ್ಚಿಸಲಾಯಿತು.



ಎಲ್ಲ ಸ್ಥಳಗಳಲ್ಲಿಯೂ ರಂಗೋಲಿ ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಬಹುಮಾನ ವಿತರಿಸಿ, ಭಾಗವಹಿಸಿದ್ದವರಿಗೆ ಸಿಹಿ ಹಂಚಿ ಸಂಭ್ರಮಿಸಲಾಯಿತು. ಈ ರೀತಿಯಲ್ಲಿ ಮುನ್ನಡೆಯ ವತಿಯಿಂದ ಹಲವಾರು ಕಡೆಯಲ್ಲಿ ಕಾರ್ಯಕ್ರಮ ಆಯೋಜಿಸಿದ್ದು, ಮುನ್ನಡೆಗೆ ಹೊಸ ಸಾಧ್ಯತೆಗಳನ್ನು ತೆರೆದಂತಾಗಿದೆ.






# ಕೆಲಸದ ಸ್ಥಳದಲ್ಲಿ ಲೈಂಗಿಕ ಕಿರುಕುಳ: ಇನ್ನೆಷ್ಟು ದಿನ ಸಹನೆ?

**ರೂ**ಪಾ ಒಂದು ಫ್ಯಾಕ್ಟರಿಯಲ್ಲಿ ಫೀಡಿಂಗ್ ಹೆಲ್ಪರ್ ಆಗಿ ದುಡಿಯುತ್ತಿರುವ 19 ವರ್ಷದ ಯುವತಿ. ಗಾರ್ಮೆಂಟ್ ಫ್ಯಾಕ್ಟರಿಯೊಂದರಲ್ಲಿ ದುಡಿಯುತ್ತಿದ್ದಾಳೆ. ಅವಳು ಕೆಲಸ ಮಾಡುವ ಕಾರ್ಖಾನೆಯ ಫ್ಲೋರ್ಇನ್‌ಚಾರ್ಜ್ ಒಬ್ಬ ಕೆಲಸ ಮಾಡುತ್ತಿರುವಾಗ ಬೇಕಾಗಿಯೇ ಇವಳ ಮೈ ಮುಟ್ಟುವುದು, ಸವರುವುದು, ಅಶ್ಲೀಲವಾಗಿ ಮಾತನಾಡುವುದು ಎಲ್ಲವನ್ನೂ ಮಾಡುತ್ತಾನೆ. ಇವಳಿಗೆ ಹಿಂಸೆಯಾದರೂ ಪ್ರತಿಭಟಿಸುವಂತಿಲ್ಲ. ಕೆಲಸದಿಂದ ಕಳುಹಿಸಿಬಿಡುತ್ತಾನೆ ಎಂಬ ಭಯ. ಯಾರ ಬಳಿಯಾದರೂ ಹೇಳಿದರೆ ನನ್ನ ನಡತೆಯ ಬಗ್ಗೆಯೇ ಶಂಕೆ ಪಡುತ್ತಾರೆ ಎಂಬ ಅನುಮಾನ.

ಮತ್ತೊಬ್ಬ ಮಹಿಳಾ ಕಾರ್ಮಿಕರಿಗೆ ಅವರ ಪ್ರೊಡಕ್ಷನ್ ಮ್ಯಾನೇಜರ್, "ಈ ತಿಂಗಳು ನಿನ್ನ ಸಂಬಳ ಜಾಸ್ತಿ ಮಾಡುತ್ತೇನೆ. ಆದರೆ ನೀನು ನಾನು ಹೇಳಿದ ಹಾಗೆ ಕೇಳಬೇಕು, ಇಲ್ಲದಿದ್ದರೆ ನಿನ್ನ ಕೆಲಸಕ್ಕೇ ತೊಂದರೆ" ಎಂದು ಬೆದರಿಕೆ ಹಾಕಿದ್ದಾರೆ. ಆ ಮಹಿಳಾ ಕಾರ್ಮಿಕರಿಗೆ ಕೆಲಸ ಬಿಟ್ಟು ಹೋಗುವುದನ್ನು ಬಿಟ್ಟು ಬೇರೆ ಆಯ್ಕೆಗಳಿಲ್ಲ.

ಇದಕ್ಕೆ ಪರಿಹಾರವಿಲ್ಲವೇ? ಇದೆ!!!

ಕೆಲಸದ ಸ್ಥಳದಲ್ಲಿ ಮಹಿಳೆಯರ ಮೇಲೆ ನಡೆಯುತ್ತಿರುವ ಲೈಂಗಿಕ ಶೋಷಣೆ ಎಲ್ಲ ಕಡೆಯೂ ನಿತ್ಯ ನಡೆಯುತ್ತಿರುವ ಸಂಗತಿ. ಪ್ರತಿಯೊಬ್ಬ ಮಹಿಳೆಯೂ ಇದಕ್ಕೆ ಯಾವುದೇ ಪರಿಹಾರವಿಲ್ಲ ಎಂದು ತಿಳಿದು ಮೌನವಾಗಿ ಸಹಿಸುತ್ತಿದ್ದಾರೆ ಅಥವಾ ಆ ಕೆಲಸ ಬಿಟ್ಟು ಹೊರನಡೆಯುತ್ತಿದ್ದಾರೆ. ಆದರೆ ಇದಕ್ಕೆ ಪರಿಹಾರ ಇದೆ. ಏನು? ಹೇಗೆ? ಅದಕ್ಕಾಗಿ ಈ ಕೆಳಗೆ ನೀಡಿರುವ ಕೆಲವು ಅಂಶಗಳನ್ನು ಗಮನವಿಟ್ಟು ಓದಿ.

**ಭಾರತ ಸರ್ವೋಚ್ಚ ನ್ಯಾಯಲಯ(ಸುಪ್ರೀಂ ಕೋರ್ಟ್)ಏನು ಹೇಳುತ್ತದೆ?**

- ಕಾರ್ಖಾನೆಗಳಂತಹ ಕೆಲಸದ ಸ್ಥಳದಲ್ಲಿ ಮಹಿಳಾ ಸಹೋದ್ಯೋಗಿಗಳಿಗೆ ಲೈಂಗಿಕ ಕಿರುಕುಳ ನೀಡುವುದು ಶಿಕ್ಷಾರ್ಹ ಅಪರಾಧ
- ಕೆಲಸದ ಸ್ಥಳದಲ್ಲಿ ಲೈಂಗಿಕ ದೂರು ಸಮಿತಿ ರಚಿಸುವುದು ಮಾಲೀಕರ ಕರ್ತವ್ಯ.
- ಈ ಸಮಿತಿಯಲ್ಲಿ ಮಹಿಳೆಯೇ ಅಧ್ಯಕ್ಷರಾಗಬೇಕು.
- ಇತರ ಸರ್ಕಾರೇತರ ಸಂಘ ಸಂಸ್ಥೆಗಳ ಪ್ರತಿನಿಧಿಯೊಬ್ಬರು ಈ ಸಮಿತಿಯಲ್ಲಿರಬೇಕು.

**ಲೈಂಗಿಕ ಕಿರುಕುಳ ಎಂದರೇನು?**

- ದೈಹಿಕ ಸ್ಪರ್ಶ ಮತ್ತು ಲೈಂಗಿಕ ಅಭಿನಯ ಅಥವಾ ಮಾತು
- ಲೈಂಗಿಕ ತೃಪ್ತಿ ನೀಡುವಂತೆ ಬೇಡಿಕೆ ಅಥವಾ ಒತ್ತಾಯ
- ಅಶ್ಲೀಲ ಚಿತ್ರಗಳನ್ನು ತೋರಿಸುವುದು ಇತ್ಯಾದಿ ಇನ್ನಾವುದೇ ರೀತಿಯ ಸ್ವಾಗತಾರ್ಹವಲ್ಲದ ಲೈಂಗಿಕ ಛಾಯೆಯ ವರ್ತನೆ

**ದೂರು ಸಮಿತಿಯ ಕರ್ತವ್ಯಗಳೇನು?**

- ಲೈಂಗಿಕ ಕಿರುಕುಳ ಅನುಭವಿಸಿರುವ ಮಹಿಳೆಯರು ನಿರ್ಭಯವಾಗಿ ಸಮಿತಿಗೆ ದೂರು ನೀಡಬಹುದು
- ದೂರು ಕೊಟ್ಟವರ ಹೆಸರನ್ನು ಬಹಿರಂಗ ಗೊಳಿಸುವಂತಿಲ್ಲ
- ಸಾಕ್ಷಿ ಒದಗಿಸಲೇ ಬೇಕೆಂದು ಒತ್ತಾಯಿಸುವಂತಿಲ್ಲ.
- ದೂರು ಕೊಟ್ಟವರಿಗೇ ಮೊದಲ ಆದ್ಯತೆ ನೀಡಬೇಕು
- ದೂರು ಕೊಟ್ಟವರನ್ನು ಗೌರವದಿಂದ ನಡೆಸಿಕೊಳ್ಳಬೇಕು.
- ಆರೋಪಿಯು ಅಪರಾಧಿ ಎಂದು ಕಂಡು ಬಂದರೆ ಅವನನ್ನು ಶಿಕ್ಷಿಸುವಂತೆ ಆಡಳಿತ ಮಂಡಳಿಗೆ ಶಿಫಾರಸುಮಾಡಬೇಕು.

**ಮಾಲೀಕರ/ಆಡಳಿತವರ್ಗದ ಜವಾಬ್ದಾರಿಗಳೇನು?**

- ಸಮಿತಿಯ ರಚನೆಯಾಗಿರುವುದರ ಬಗ್ಗೆ ನೋಟೀಸ್ ಬೋರ್ಡ್ ಹಾಕುವುದರ ಮೂಲಕ ಎಲ್ಲರಿಗೂ ತಿಳಿಸಬೇಕು.
- ಸಮಿತಿಯು ತನ್ನ ಕಾರ್ಯವನ್ನು ನಿರ್ವಹಿಸಲು ಅನುಕೂಲವಾದಂತಹ ವಾತಾವರಣ ಕಲ್ಪಿಸಿಕೊಡಬೇಕು.
- ಅಪರಾಧಿಗೆ ಶಿಕ್ಷೆ ನೀಡುವಂತೆ ಸಮಿತಿಯು ಶಿಫಾರಸು ಮಾಡಿದಲ್ಲಿ, ತಕ್ಷಣವೇ ಅದನ್ನು ಜಾರಿಗೆ ತರಬೇಕು.
- ವಿಚಾರಣೆ ನಡೆಯುವಾಗ ದೂರು ಕೊಟ್ಟವರಿಗೆ ರಕ್ಷಣೆ ಒದಗಿಸಬೇಕು.

**ಲೈಂಗಿಕ ಕಿರುಕುಳವನ್ನು ಇನ್ನು ಮುಂದೆ ಮೌನವಾಗಿ ಸಹಿಸಬೇಕಾಗಿಲ್ಲ. ಕೆಲಸದ ಸ್ಥಳದಲ್ಲಿರುವ ಲೈಂಗಿಕ ಕಿರುಕುಳ ದೂರು ಸಮಿತಿಗೆ ನಿರ್ಭಯವಾಗಿ ದೂರು ಸಲ್ಲಿಸಬಹುದು.**

## ಆಶಯ


ಏನಾದರೊಂದು ಸಾಧಿಸಲೇ ಬೇಕು
ಈ ಜೀವನದಲ್ಲಿ. . . ಈ ಜೀವ ನಮ್ಮಲ್ಲಿರೋತನಕ

ಒಳ್ಳೆಯ ಮಗನಾಗಿ, ಒಳ್ಳೆಯ ಸ್ನೇಹಿತನಾಗಿ
ಒಳ್ಳೆಯ ಬಂಧುವಾಗಿ, ಒಳ್ಳೆಯ ಪ್ರಜೆಯಾಗಿ
ಏನಾದರೊಂದು ಸಾಧಿಸಲೇ ಬೇಕು

ಜೀವಾದ ಹಂಗು ತೊರೆದು ದೇಶಾವ
ಕಾಪಾಡೋ ಸೈನಿಕನಂತೆ
ಕೈಮೀರಿ ಹೋಗೋ ಪ್ರಾಣಾವ ಕೈ ಹಿಡಿದು
ಕಾಪಾಡೊ ವೈದ್ಯನಂತೆ
ಏನಾದರೊಂದನ್ನು ಸಾಧಿಸಬೇಕು

ತನ್ನ ಹೊಟ್ಟೆಯ ಮರೆತು ಪರರ
ಹೊಟ್ಟೆಯ ತುಂಬಿಸೋ ರೈತನಂತೆ
ತನ್ನ ದುಃಖವಾ ಮರೆತು ಪರರ ಕಷ್ಟಕ್ಕೆ ಹೋರಾಡೋ
ಒಳ್ಳೆಯ ಮನುಜನಂತೆ
ಏನಾದರೊಂದನ್ನು ಸಾಧಿಸಲೇ ಬೇಕು
ಈ ಜೀವ ನಮ್ಮಲ್ಲಿರೋತನಕ

ಮಂಜುನಾಥ್
ತಾಯಿ: ಶಾಂತಲಕ್ಷ್ಮಿ
ಕಾರ್ಖಾನೆ: ನಮಸ್ತೆ ಎಕ್ಸ್ ಪೋರ್ಟ್ಸ್



# 'ಮುನ್ನಡೆ' ವತಿಯಿಂದ ವಾಚನಾಲಯ / ಗ್ರಂಥಾಲಯ ಪ್ರಾರಂಭ

**ಗಾ**ರ್ಮೆಂಟ್ಸ್ ಮಹಿಳಾ ಕಾರ್ಮಿಕರು ಹಾಗೂ ಅವರ ಮಕ್ಕಳಿಗೆ ಇಲ್ಲೊಂದು ಸುವರ್ಣಾವಕಾಶ:

ದಿನಾಂಕ 28–5–2009 ರಿಂದ ಮುನ್ನಡೆಯು ತನ್ನ ನಾಯಂಡಹಳ್ಳಿ ಆಫೀಸ್‌ನಲ್ಲಿ ವಾಚನಾಲಯ / ಗ್ರಂಥಾಲಯವನ್ನು ತೆರೆಯುತ್ತಿದೆ. ಆಸಕ್ತ ಮಹಿಳಾ ಕಾರ್ಮಿಕರು ಮತ್ತು ಅವರ ಮಕ್ಕಳು ಈ ವಾಚನಾಲಯದ ಉಪಯೋಗ ಪಡೆದುಕೊಳ್ಳ ಬಹುದು. ಶೈಕ್ಷಣಿಕ, ಸಾಮಾಜಿಕ, ಮನರಂಜನಾ ಹಾಗೂ ಐತಿಹಾಸಿಕ ಪುಸ್ತಕಗಳನ್ನು ಹೊಂದಿರುವ ಈ ವಾಚನಾಲಯವು ಪ್ರತಿದಿನ ಸಂಜೆ 4.00 ಗಂಟೆಯಿಂದ ಸಂಜೆ 7.30 ಗಂಟೆಯವರೆಗೂ ಕಾರ್ಯ ನಿರ್ವಹಿಸುತ್ತದೆ.

ಕಾರ್ಮಿಕರನ್ನು ಸ್ಥಳೀಯವಾಗಿ ಸಂಘಟಿಸುತ್ತಿರುವ ಮುನ್ನಡೆಯು ವಿವಿಧ ಕಾರ್ಯಕ್ರಮಗಳನ್ನು ನಡೆಸುವ ಮೂಲಕ ಅವರ ಸಮಸ್ಯೆಗಳಿಗೆ ಸ್ಪಂದಿಸುತ್ತಿದೆ. ಗ್ರಂಥಾಲಯದ ಅವಶ್ಯಕತೆಯ ಬಗ್ಗೆ ಮುನ್ನಡೆಯ ಕಾರ್ಯಕರ್ತರು ನಾಯಂಡ ಹಳ್ಳಿಯಲ್ಲಿ ಸುಮಾರು 100 ಕಾರ್ಮಿಕರ ಸರ್ವೆ ನಡೆಸಿದಾಗ ಅಲ್ಲಿನ ಮಕ್ಕಳಿಗೆ ಓದುವ ಆಸಕ್ತಿ ಇದ್ದರೂ, ಹತ್ತಿರದಲ್ಲೆಲ್ಲೂ ಸಾರ್ವಜನಿಕ ಗ್ರಂಥಾಲಯವಾಗಲೀ, ವಾಚನಾಲಯ ವಾಗಲೀ ಇಲ್ಲವೆಂದು ಕಂಡು ಬಂತು.

ಇದರ ಆಧಾರದ ಮೇರೆಗೆ ಈ ಕೊರತೆಯನ್ನು ಪೂರ್ಣವಾಗಿ ಅಲ್ಲದಿದ್ದರೂ, ಸ್ವಲ್ಪ ಮಟ್ಟಿಗೆ ನಿವಾರಿಸಲು ಮುನ್ನಡೆ ನಿರ್ಧರಿಸಿ, ಮಕ್ಕಳಿಗಾಗಿ ಒಂದು ವಾಚನಾಲಯ/ಗ್ರಂಥಾಲಯವನ್ನು ಪ್ರಾರಂಭಿಸಲು ಯೋಜಿಸಿದೆ.

ಪ್ರತಿದಿನ 4 ಗಂಟೆಯಿಂದ 7–30 ಗಂಟೆಯವರೆಗೂ ತೆರೆದಿರುವ ಈ ವಾಚನಾಲಯದಲ್ಲಿ ಪುಸ್ತಕಗಳನ್ನು ಸದ್ಯಕ್ಕೆ ಅಲ್ಲಿಯೇ ಕುಳಿತು ಓದುವ ವ್ಯವಸ್ಥೆಯಿದೆ. ಮುಂದಿನ ದಿನಗಳಲ್ಲಿ ಪುಸ್ತಕಗಳನ್ನು ಮನೆಗೆ ಕೊಡುವ ವ್ಯವಸ್ಥೆಯನ್ನೂ ಸಹ ಮಾಡಲಾಗುತ್ತದೆ.

ಆಸಕ್ತ ಮಹಿಳಾ ಕಾರ್ಮಿಕರೂ ಸಹ ಈ ಅವಕಾಶವನ್ನು ಉಪಯೋಗಿಸಿಕೊಳ್ಳಬಹುದು. ●

ವಿಳಾಸ: **ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಮುನ್ನಡೆ**
ನಂ. 35, ಮುತ್ತಯ್ಯ ಕಾಂಪೌಂಡ್
ನಾಯಂಡ ಹಳ್ಳಿ, ಮೈಸೂರು ರಸ್ತೆ,
ಬೆಂಗಳೂರು–560 039

ಸಮಯ: ಸಂಜೆ 4 ರಿಂದ 7.30 ರ ವರೆಗೂ
ರಜಾದಿನ: ಸೋಮವಾರ
ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: 9945387099 ಮತ್ತು 9741863687



## ಬಾಲ ಸೇವಿಕಾ ತರಬೇತಿ ಕೋರ್ಸ್

*ಕಾರ್ಮಿಕರಿಗೆ ಇದೊಂದು ಸದವಕಾಶ,*

ಸಂವಾದ ಹಾಗೂ ಕೆ.ಎಸ್.ಸಿ.ಸಿ.ಡಬ್ಲ್ಯೂ ಸಂಸ್ಥೆಗಳ ಸಹಯೋಗದಲ್ಲಿ ಎಸ್.ಎಸ್.ಎಲ್.ಸಿ/ಪಿ.ಯು.ಸಿ ಪಾಸ್ ಅಥವಾ ಫೇಲ್ ಆದ ಹೆಣ್ಣುಮಕ್ಕಳಿಗೆ ಬಾಲಸೇವಿಕಾ ತರಬೇತಿ ನಡೆಯುತ್ತಿದ್ದು, ಪ್ರಸ್ತುತ 47 ನೇ ಬ್ಯಾಚ್ ಗೆ ಅರ್ಜಿಗಳನ್ನುಆಹ್ವಾನಿಸಲಾಗಿದೆ.

ಮಕ್ಕಳನ್ನು ಸುರಕ್ಷಿತವಾಗಿ ನೋಡಿಕೊಳ್ಳುವ ಮತ್ತು ಅವರ ಬೆಳವಣಿಗೆಗೆ ಪೂರಕ ವಾತಾವರಣವನ್ನು ಕಲ್ಪಿಸಲು ಬೇಕಾಗುವ ಕೌಶಲ್ಯಗಳನ್ನು ಈ ತರಬೇತಿಯಲ್ಲಿ ನೀಡಲಗುತ್ತದೆ. ಇದನ್ನು ಯಶಸ್ವಿಯಾಗಿ ಪೂರೈಸಿದವರು ಗಾರ್ಮೆಂಟ್ಸ್ ಕಾರ್ಖಾನೆಗಳ ಕ್ರಷ್ ಗಳಲ್ಲಿ ಅಥವಾ ವಿವಿಧ ಸಂಸ್ಥೆಗಳು ನಡೆಸುವ ಬಾಲವಾಡಿಗಳಲ್ಲಿ ಟೀಚರ್ ಆಗಬಹುದು.

**ಕೋರ್ಸ್‌ಗೆ ಸಂಬಂಧಿಸಿದ ಮಾಹಿತಿಗಳು ಈ ಕೆಳಗಿನಂತಿವೆ. ಮೊದಲು ಬಂದವರಿಗೆ ಮೊದಲು ಆದ್ಯತೆ.**

| | | |
|---|---|---|
| ಲಭ್ಯವಿರುವ ಒಟ್ಟು ಸೀಟು | : | 50 |
| ಪ್ರವೇಶ | : | ಜೂನ್ ನಲ್ಲಿ ಪ್ರಾರಂಭವಾಗುತ್ತದೆ. |
| ವಯೋಮಿತಿ | : | 18 ವರ್ಷದಿಂದ 35 ವರ್ಷದ ಒಳಗಿನ ಮಹಿಳೆಯರು |
| ಅರ್ಹತೆ | : | ಎಸ್.ಎಸ್.ಎಲ್.ಸಿ/ಪಿ.ಯು.ಸಿ ಪಾಸ್ ಅಥವಾ ಫೇಲ್. ಕನ್ನಡ ಚೆನ್ನಾಗಿ ಓದಲು ಬರೆಯಲು ಬರಬೇಕು. |
| ತರಬೇತಿಯ ಅವಧಿ | : | 10 ತಿಂಗಳು (ಅಗತ್ಯವಿದ್ದವರಿಗೆ ಹಾಸ್ಟೆಲ್ ಸೌಲಭ್ಯವಿದೆ) |
| ತರಬೇತಿಯ ಶುಲ್ಕ | : | 2100 ರೂ.ಗಳು |
| ಸ್ಕಾಲರ್ ಶಿಪ್ | : | ಫೀಸ್ ಕಟ್ಟಲು ಸಾಧ್ಯವಿಲ್ಲದವರು ಅಗತ್ಯ ಮಾಹಿತಿಗಳನ್ನು ನೀಡಿದರೆ ಸ್ಕಾಲರ್ ಶಿಪ್ ನೀಡಲಾಗುವುದು. |

***ಆಸಕ್ತರು ಜೂನ್ 20 ರ ಒಳಗಾಗಿ ತಮ್ಮ ಅರ್ಜಿಗಳನ್ನು ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: 9686537087***



Scanned with OKEN Scanner

## ಮುನ್ನಡೆಗೆ ದೊರಕಿದ ಅಮೂಲ್ಯ ಅವಕಾಶ.....




ದಿನಾಂಕ: 22-3-2009 ರಂದು 90 ತುಂಬಿದ ಸಂಗಾತಿ ಶ್ರೀ ಬಿ.ವಿ ಕಕ್ಕಿಲ್ಲಾಯ ಅವರಿಗೆ ಎಂ.ಎಸ್. ಕೃಷ್ಣನ್ ಸ್ಮರಣ ಸಂಸ್ಥೆಯು ಆಯೋಜಿಸಿದ್ದ ಅಭಿನಂದನಾ ಸಮಾರಂಭದಲ್ಲಿ, ಮುನ್ನಡೆಯ ಸದಸ್ಯರೂ ಭಾಗವಹಿಸಿದ್ದರು.

ನಗರದ ಸೆನೆಟ್ ಹಾಲ್‌ನಲ್ಲಿ ಭಾರತ ಕಮ್ಯೂನಿಸ್ಟ್ ಪಕ್ಷದ ನಾಯಕರೂ, ಸ್ವಾತಂತ್ರ್ಯ ಹೋರಾಟಗಾರರೂ, ರೈತಕಾರ್ಮಿಕ ನಾಯಕರೂ, ಆದ ಬಿ.ವಿ. ಕಕ್ಕಿಲ್ಲಾಯ ಅವರಿಗೆ 90 ವರ್ಷ ತುಂಬಿದ ಸಂದರ್ಭದಲ್ಲಿ ಸನ್ಮಾನಿಸಲಾಯಿತು. ಈ ಕಾರ್ಯಕ್ರಮದಲ್ಲಿ ಮುನ್ನಡೆಯ ಸದಸ್ಯರು, ಆ ಹಿರಿಯರಿಗೆ ಹೂ ಗುಚ್ಛ ಕೊಟ್ಟು ಅಭಿನಂದನೆ ಸಲ್ಲಿಸಿದರು.

ಎಂ.ಎಸ್ ಕೃಷ್ಣನ್ ಸ್ಮರಣ ಸಂಸ್ಥೆ, ಬೆಂಗಳೂರು, ಇವರು ಆಯೋಜಿಸಿದ್ದ ಈ ಕಾರ್ಯಕ್ರಮದಲ್ಲಿ, ಬಿ.ವಿ ಕಕ್ಕಿಲ್ಲಾಯ ಅವರು ಸಲ್ಲಿಸಿರುವ ಸೇವೆಯ ಬಗ್ಗೆ ವಿವಿಧ ಗಣ್ಯರು ಬರೆದಿರುವ ಬರಹ ಗಳನ್ನೊಳಗೊಂಡ **'ನಿರಂತರ'** ಎಂಬ ಅಭಿನಂದನಾ ಗ್ರಂಥವನ್ನೂ ಸಹ ಅವರಿಗೆ ಅರ್ಪಿಸಲಾಯಿತು.

ಕರ್ನಾಟಕ ರಾಜ್ಯ ಎ.ಐ.ಟಿ.ಯು.ಸಿ. ಅಧ್ಯಕ್ಷರಾದ ಎಮ್.ಸಿ. ನರಸಿಂಹನ್, ಕೋ ಚೆನ್ನಬಸಪ್ಪ, ಹಾಗೂ ಡಾ॥ ಜಿ. ರಾಮಕೃಷ್ಣ ಅವರು ಭಾಗವಹಿಸಿದ್ದ ಈ ಕಾರ್ಯಕ್ರಮದಲ್ಲಿ ವಿವಿಧ ಕಾರ್ಮಿಕ ಸಂಘಟನೆಗಳ ಸದಸ್ಯರೂ ಹಾಜರಿದ್ದರು.

ಮಹಿಳಾ ಕಾರ್ಮಿಕರ ಸಂಘಟನೆಯಾಗಿ, ಈ ಹಿರಿಯರನ್ನು ಅಭಿನಂದಿಸಲು ದೊರಕಿದ ಅವಕಾಶಕ್ಕೆ ಮುನ್ನಡೆ ಹೆಮ್ಮೆ ಪಡುತ್ತಿದೆ.

### ನಾಯಂಡಹಳ್ಳಿ 'ಮುನ್ನಡೆ' ಆಫೀಸ್ – ಕಾರ್ಮಿಕರ ಅನಿಸಿಕೆಗಳು

'ಮುನ್ನಡೆ' ಕಛೇರಿಯಿಂದ ನಾವು ಕಾರ್ಖಾನೆ ಕಾನೂನುಗಳ ಬಗ್ಗೆ ತಿಳಿದುಕೊಳ್ಳಲು ಸಹಾಯವಾಗಿದೆ.

*–ಸುಜಾತ, ಬಾಂಬೆ ರೇಯಾನ್*

'ಮುನ್ನಡೆ' ಕಛೇರಿ ಇರುವುದರಿಂದ ನಾವು ವೈದ್ಯರ ಸಲಹೆ – ತಪಾಸಣೆ ಪಡೆದುಕೊಳ್ಳುತ್ತಿದ್ದೇವೆ.

*–ಜ್ಯೋತಿ, VKN-ಸೇವಂತಿ ಲೋಕಲ್ ಕಮಿಟಿ*

'ಮುನ್ನಡೆ' ಕಛೇರಿಯಲ್ಲಿ ಗ್ರಂಥಾಲಯ ಪ್ರಾರಂಭವಾಗಿರುವುದು ಮಕ್ಕಳಿಗೆ ಅನುಕೂಲಕರವಾಗಿದೆ.

*–ರಾಜೇಶ್ವರಿ, ಟೆಕ್ಸ್‌ಪೋರ್ಟ್, ನಿಸರ್ಗ ಲೋಕಲ್ ಕಮಿಟಿ*

## ಆಡಳಿತ ವರ್ಗದ ನಿರ್ಲಕ್ಷ್ಯತೆ-ಕಾರ್ಮಿಕರ ಜೀವದ ಅನಿಶ್ಚಿತತೆ




'ಕಾರ್ಮಿಕರೋ.... ಕುರಿಗಳೋ' ಪೀಣ್ಯ ಕಾರ್ಖಾನೆಯೊಂದರಲ್ಲಿ ಒದಗಿಸಲಾದ ಬಸ್ಸನಲ್ಲಿ ಕಿಕ್ಕಿರಿದು ತುಂಬಿರುವ ಕಾರ್ಮಿಕರು

ಒಂದರ ಮೇಲೊಂದು ಸರಣಿ ಅಪಘಾತ ಸಂಭವಿಸಿದರೂ ಎಚ್ಚೆತ್ತು ಕೊಳ್ಳದೆ ನಿರ್ಲಕ್ಷ್ಯ ತೋರಿಸುತ್ತಿರುವ ಬಾಂಬೆ ರೇಯಾನ್ ಫ್ಯಾಶನ್ಸ್‌ಲಿ. ಆಡಳಿತವರ್ಗವು, ಕಾರ್ಮಿಕರ ಜೀವದ ಜೊತೆಗೆ ಚೆಲ್ಲಾಟವಾಡುತ್ತಿದೆ.

ದಿನಾಂಕ 4.6.2009 ರಂದು, ಮತ್ತೊಂದು ಬಾರಿ ಬಾಂಬೆ ರೇಯಾನ್ ಫ್ಯಾಶನ್ಸ್ ಲಿ. ನ ಬಸ್ ಅಪಘಾತಕ್ಕೀಡಾಗಿದೆ. !!

ದಿನಾಂಕ 4.6.2009 ರಂದು ಚಿಕ್ಕ ಮುದವಾಡಿಯಿಂದ ಮೈಸೂರು ರಸ್ತೆಯಲ್ಲಿರುವ ಎಲ್.ಎನ್.ಜೆ. ಕಾರ್ಖಾನೆಗೆ ಕಾರ್ಮಿಕರನ್ನು ಕರೆತರುತ್ತಿದ್ದ ಮಿನಿ ಬಸ್ ವಾಹನವು ಗೋಪ ಹಳ್ಳಿ ಕೆರೆಯ ಏರಿಯ ಮೇಲೆ ಬರುವಾಗ ಕೆಳಗೆ ಉರುಳಿಬಿದ್ದು ಸುಮಾರು 18 ಮಂದಿ ಕಾರ್ಮಿಕರು ಗಾಯ ಗೊಂಡಿದ್ದಾರೆ. ಮೈಸೂರು ರಸ್ತೆಯ ರಾಜರಾಜೇಶ್ವರಿ ಆಸ್ಪತ್ರೆಯಲ್ಲಿ, 10 ಕಾರ್ಮಿಕರು ಒಳ ರೋಗಿಗಳಾಗಿ ಚಿಕಿತ್ಸೆ ಪಡೆದುಕೊಂಡಿದ್ದಾರೆ. ಈ ಹತ್ತು ಕಾರ್ಮಿಕರಲ್ಲಿ 3 ಮಂದಿಗೆ ಹೆಚ್ಚಿನ ಗಾಯಗಳಾಗಿದ್ದು ಉಳಿದ ಕಾರ್ಮಿಕರಿಗೆ ಸಣ್ಣ ಪುಟ್ಟ ಗಾಯಗಳಾಗಿವೆ. "ಈ ಬಸ್ ಉರುಳಿರುವುದನ್ನು ನೋಡಿದರೆ ತುಂಬಾ ದೊಡ್ಡ ಅನಾಹುತವೇ ಸಂಭವಿಸಬೇಕಾಗಿತ್ತು. ಆದರೆ ಅದೃಷ್ಟವಶಾತ್ ಇಷ್ಟರಲ್ಲೇ ಮುಗಿಯಿತಲ್ಲ" ಎಂದು ಕಾರ್ಮಿಕರು ಭಯದಿಂದ ಹೇಳುತ್ತಾರೆ.

ಬಾಂಬೆ ರೇಯಾನ್ ಕಾರ್ಖಾನೆಗೆ ಬಸ್ ಅಪಘಾತವೆಂಬುದು ಹೊಸದಲ್ಲ. 2006ರಲ್ಲಿ ಕಾರ್ಖಾನೆಯ ಬಸ್ ಅಪಘಾತಕ್ಕೀಡಾಗಿ ಕಾರ್ಮಿಕರು ಕೈ ಕಾಲು ಮುರಿದುಕೊಂಡಿದ್ದರು. 2007ರ ಏಪ್ರಿಲ್‌ನಲ್ಲಿ ಗಾಯತ್ರಿ ಎಂಬ ಕಾರ್ಮಿಕರು ಕಾರ್ಖಾನೆಯ ಬಸ್ ಡಿಕ್ಕಿ ಹೊಡೆದು ಸ್ಥಳದಲ್ಲೇ ಸಾವಿಗೀಡಾಗಿದ್ದರು. 2008 ರಲ್ಲಿಯೂ ಕಾರ್ಖಾನೆಯ ಬಸ್ ಅಪಘಾತದಲ್ಲಿ 20 ಕಾರ್ಮಿಕರು ಗಾಯಗೊಂಡು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದರು.

ಕಾರ್ಮಿಕರನ್ನು ಕರೆತರುವ ವ್ಯವಸ್ಥೆ ಮಾಡುವುದೇ ದೊಡ್ಡ ವಿಷಯ ಎಂಬ ಧೋರಣೆ ತೋರುವ ಆಡಳಿತ ವರ್ಗದವರು ಈ ರೀತಿ ಸರಣಿ ಅಪಘಾತಗಳು ನಡೆಯುತ್ತಿದ್ದರೂ ಯಾವುದೇ ಮುಂಜಾಗ್ರತಾ ಕ್ರಮ ಕೈಗೊಳ್ಳದೇ ಆ ಕಾರ್ಮಿಕರ ಸುರಕ್ಷತೆಯನ್ನು ಕಡೆಗಣಿಸುತ್ತಿದ್ದಾರೆ.

ತಕ್ಷಣವೇ ಬಾಂಬೆರೇಯಾನ್ ಫ್ಯಾಷನ್ ಲಿ.ನ ಆಡಳಿತವರ್ಗವು ಈ ಗಾಯಾಳುಗಳ ಚಿಕಿತ್ಸೆಗೆ ಆದ್ಯತೆ ಕೊಟ್ಟು ಅವರಿಗೆ ಸೂಕ್ತ ಪರಿಹಾರ ದೊರಕಿಸಿಕೊಡಬೇಕೆಂದು ಮುನ್ನಡೆ ಈ ಮೂಲಕ ಆಗ್ರಹಿಸುತ್ತಿದೆ. ●

ಕಾಮನಬಿಲ್ಲು

# ಶುಭಾಶಯಗಳು



ಸುಜಾತ ಮತ್ತು ನಟರಾಜ್ ದಂಪತಿಗಳು
ವಿವಾಹ ವಾರ್ಷಿಕೋತ್ಸವ 26-6-2009
ಕಾರ್ಖಾನೆ: ವಿವೇಕ್ ಇಂಡಸ್ಟ್ರೀಸ್

**ಈ 2008-2009ರ ಸಾಲಿನ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ತೋರಿದ ಸಾಧನೆಗಾಗಿ 'ಮುನ್ನಡೆ'ಯು ಈ ವಿದ್ಯಾರ್ಥಿಗಳನ್ನು ಅಭಿನಂದಿಸುತ್ತಿದೆ**



ಕಾವ್ಯ ಕೆ.: 86%
ತಾಯಿ : ಸರೋಜ, ಉಪಾಧ್ಯಕ್ಷರು 'ಮುನ್ನಡೆ'
ತಂದೆ : ಕನ್ನಪ್ಪ



ಶಶಿಕುಮಾರ್ : 70 %
ತಾಯಿ : ಶಿವಮ್ಮ, ಟೆಕ್ಸ್‌ಪೋರ್ಟ್
ತಂದೆ : ಲೇಟ್ ಕೃಷ್ಣಶೆಟ್ಟಿ



ರಮ್ಯ : 79 %
ತಾಯಿ: ಶೋಭ, ದೇವಕಿ ಡಿಸೈನ್ಸ್
ತಂದೆ : ವೇಣುಗೋಪಾಲ್



ಲೀಲಾಶ್ರೀ : 72 %
ತಾಯಿ : ಪೂರ್ಣಿಮಾ
ತಂದೆ : ಅಶ್ವತ್ಥನಾರಾಯಣಪ್ಪ

## ನೆರವು

ಪ್ರತಿ ಶನಿವಾರ ಹಾಗೂ ಭಾನುವಾರಗಳಂದು, ಗಾರ್ಮೆಂಟ್ಸ್ ಕಾರ್ಮಿಕರು ಯಾವುದೇ ಕಾರ್ಮಿಕ ವಿವಾದಕ್ಕಾಗಿ, ತಮ್ಮ ಮೇಲಿನ ದೌರ್ಜನ್ಯ, ಕೌಟುಂಬಿಕ ಸಲಹೆಗಾಗಿ ತಜ್ಞ ವಕೀಲರನ್ನು ಈ ಕೆಳಕಂಡ ಸಂಸ್ಥೆಯಲ್ಲಿ ಉಚಿತವಾಗಿ ಸಂಪರ್ಕಿಸಬಹುದು

**ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಮುನ್ನಡೆ,** ನಂ.8/3, ಶ್ರೀಮಾತಾ ನಿಲಯ ನ್ಯೂಟಿಂಬರ್‌ಯಾರ್ಡ್ ಲೇಔಟ್, ಮೈಸೂರು ರಸ್ತೆ, ಬೆಂಗಳೂರು-26. ದೂ.: **26751320**

**ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಮುನ್ನಡೆ**
ನಂ.35, ಮುತ್ತಯ್ಯ ಕಾಂಪೌಂಡ್, ನಾಯಂಡಹಳ್ಳಿ, ಮೈಸೂರು ರಸ್ತೆ, ಬೆಂಗಳೂರು-39

ಸಮಯ : **ಶನಿವಾರ ಸಂಜೆ 5-30ರ ನಂತರ ಹಾಗೂ ಭಾನುವಾರ ಬೆಳಿಗ್ಗೆ 10-30ರ ನಂತರ**

## ಮಹಿಳಾ ಕಾರ್ಮಿಕರಿಗೆ ಸಹಾಯ ಮಾಡುವ ಇನ್ನಿತರೆ ಸಂಸ್ಥೆಗಳು

1. **ಗಾರ್ಮೆಂಟ್ ಅಂಡ್ ಟೆಕ್ಸ್‌ಟೈಲ್ ವರ್ಕರ್ಸ್ ಯೂನಿಯನ್ (GATWU)**
   ನಂ. 27, 5ನೇ ಮುಖ್ಯರಸ್ತೆ
   6ನೇ ಅಡ್ಡರಸ್ತೆ
   ಸಂಪಂಗಿರಾಮನಗರ
   ಬೆಂಗಳೂರು - 560 027.

   *ಪೀಣ್ಯ ಶಾಖೆ*
   ನಂ. 91, 2ನೇ ಮುಖ್ಯರಸ್ತೆ
   5ನೇ ಅಡ್ಡರಸ್ತೆ, 3ನೇ ಫೇಸ್
   ಗಣಪತಿ ನಗರ, ಪೀಣ್ಯ
   ಬೆಂಗಳೂರು - 560 056
   ದೂ: 28364679

2. **ಕರ್ನಾಟಕ ಮಹಿಳಾ ಆಯೋಗ**
   ನಂ. 105, ಮೊದಲನೇ ಮಹಡಿ
   ಕರ್ನಾಟಕ ಗೃಹ ಮಂಡಳಿ ಕಟ್ಟಡ
   ಕಾವೇರಿಭವನ, ಕೆ.ಜಿ.ರಸ್ತೆ,
   ಬೆಂಗಳೂರು-560009
   ದೂ.: 22216485

3. **ವನಿತಾ ಸಹಾಯವಾಣಿ**
   ಪೊಲೀಸ್ ಕಮಿಷನರ್ ಕಛೇರಿ ಆವರಣ
   ಇನ್‌ಫೆಂಟರಿ ರಸ್ತೆ, ಬೆಂಗಳೂರು
   ಉಚಿತ ದೂರವಾಣಿ: 1091
   ದೂ.: 22943225

4. **ವಿಮೋಚನಾ**
   ನಂ, 33/1-9
   ತ್ಯಾಗರಾಜ ಬಡಾವಣೆ, ಜೈಭಾರತನಗರ
   ಮಾರುತಿ ಸೇವಾನಗರ, ಬೆಂಗಳೂರು-38
   ದೂ.: 25492781 / 25492782

5. **ಕರ್ನಾಟಕ ಕಾನೂನು ಸೇವೆಗಳ ಪ್ರಾಧಿಕಾರ**
   ನ್ಯಾಯ ದೇಗುಲ, ಎಚ್. ಸಿದ್ಧಯ್ಯ ರಸ್ತೆ
   ಬೆಂಗಳೂರು-27

**ಪ್ರತಿ ತಿಂಗಳ ಎರಡನೇ ಭಾನುವಾರದಂದು ನಾಯಂಡಹಳ್ಳಿಯಲ್ಲಿರುವ ಮುನ್ನಡೆಯ ಕೇಂದ್ರದಲ್ಲಿ ಕಾರ್ಮಿಕರಿಗಾಗಿ ಉಚಿತ ವೈದ್ಯಕೀಯ ತಪಾಸಣೆಯನ್ನು ನಡೆಸಲಾಗುತ್ತಿದೆ. ಅಗತ್ಯವಿರುವ ಕಾರ್ಮಿಕರು ಇದರ ಉಪಯೋಗವನ್ನು ಪಡೆದುಕೊಳ್ಳಬೇಕಾಗಿ ಕೇಳಿಕೊಳ್ಳುತ್ತೇವೆ.**

*ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ :*
**97741863687, 9739200749**

ಸಂಪಾದಕ ಮಂಡಳಿ : ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಮುನ್ನಡೆ, ನಂ, 8/3, ಶ್ರೀಮಾತಾ ನಿಲಯ, ಎನ್.ಟಿ.ವೈ. ಲೇಔಟ್, ಮೈಸೂರು ರಸ್ತೆ, ಬೆಂ-560026. ದೂ. : 2675 1320
ಪ್ರಕಾಶಕರು : ಸಿವಿಡೆಪ್-ಇಂಡಿಯಾ. ಮುದ್ರಣ : ಇಳಾ ಮುದ್ರಣ, ಬೆಂಗಳೂರು - 560 026. ದೂ. : 26757159

Scanned with OKEN Scanner